ಅವನೆದೆಯಲ್ಲಿ ಎದ್ದ ಭಾವನೆಗಳನ್ನು ಮೀಟಿ ಹೋದಂತೆನಿಸಿ ಅವನ ನಡಿಗೆಗೆ ವೇಗ ಬರುತ್ತದೆ.

ಕೊನೆಯ ಲೋಕಲ್ ಟ್ರೈನ್ ಸ್ವಲ್ಪದರಲ್ಲಿಯೇ ಅವನಿಗೆ ಸಿಕ್ಕು ಹೇಗಾದರೂ ಮನೆಗೆ ಹೋದರೆ ಸಾಕು ಎಂದು ಅವನಿಗೆ ಅನ್ನಿಸತೊಡಗುವುದರಲ್ಲೇ ಸ್ಟೇಷನ್ ಬರುತ್ತದೆ. ಜೋಲಿ ಹೊಡೆಯುತ್ತ ಇಳಿಯುತ್ತಿದ್ದಂತೆ ಬೇಗ ಮನೆಗೆ ಹೋಗಬೇಕೆಂದು ನಡಿಗೆಯ ವೇಗವನ್ನು ಹೆಚ್ಚಿಸುತ್ತಾನೆ. ಗೂರ್ಖಾನ ಲಾಠಿಯ ಸದ್ದು ಮತ್ತು ನಾಯಿಗಳ ಬೊಗಳುವ ಸದ್ದು ಅವನ ಕಿವಿಗೆ ಸಮೀಪಿಸಿದಂತೆ ಅವನು ತನ್ನ ಮನೆ ಹತ್ತಿರದಲ್ಲೇ ಇದೆ ಎಂದು ಭಾವಿಸುತ್ತಾನೆ.

ಮನೆಯ ಬಾಗಿಲು ಬಡಿಯುತ್ತಾನೆ. ಪ್ರತಿದಿನದಂತೆ ಅಂದೂ ಚಿಲಕ ಹಾಕಿರುವುದಿಲ್ಲ. ಕತ್ತಲೆಯಲ್ಲಿ ಇಣುಕಿ ನೋಡುತ್ತಾನೆ. ಮಂಚದ ಮೇಲೆ ಮಗ ಅಸ್ತವ್ಯಸ್ತವಾಗಿ ಬಿದ್ದುಕೊಂಡಿದ್ದಾನೆ. ಲೈಟ್ ಬಟನ್ ಹಾಕುವುದು ಕೂಡಾ ಅವನಿಗೆ ಬೇಡವೆನಿಸುತ್ತದೆ. ಕತ್ತಲೆಯಲ್ಲಿಯೇ ಬಟ್ಟೆ ಬದಲಾಯಿಸಿ ಹೆಂಡತಿಯ ಕಡೆ ಸಾಗುತ್ತಾನೆ. ಒಂದು ಬೆಡ್‌ಶೀಟಿನ ಮೇಲೆ ಅವಳು ಮಲಗಿದ್ದಾಳೆ. ಕತ್ತಲೆಯಲ್ಲಿಯೂ ಅವನ ಕಣ್ಣು ಅವಳ ದೇಹದಾಕೃತಿ ಮೇಲೆ ಬೀಳುತ್ತಿದ್ದಂತೆ ಮೆಲ್ಲಗೆ ಹೆಂಡತಿಯ ಚಾದರಿನೊಳಗೆ ಸೇರಿಕೊಳ್ಳುತ್ತಾನೆ. ಅವನ ಸ್ಪರ್ಶದಿಂದ ಗಾಢ ನಿದ್ದೆಯಲ್ಲಿದ್ದ ಅವಳು ಎಚ್ಚರಗೊಳ್ಳುತ್ತಾಳೆ. ಅವನ ಸ್ಪರ್ಶ ಅವಳಿಗೆ ಕಳೆದ ಹತ್ತು ವರ್ಷದಿಂದ ಪರಿಚಯವಿರುವುದರಿಂದ ಅವಳು ಕೊರಳ ಸುತ್ತ ಕೈ ಹಾಕಿ ಬರಸೆಳೆದು ಪಿಸುಮಾತಿನಲ್ಲಿ,

"ಇಪ್ಪತ್ತು ರೂಪಾಯಿ ತಂದಿರೇನು?..." ಎಂದು ಕೇಳುತ್ತಾಳೆ.

ಹೆಂಡತಿಯ ಈ ಪ್ರಶ್ನೆಯಿಂದ ಅವನ ನಶೆ ಜರ್‍ರನೆ ಇಳಿದು ವೇಶ್ಯೆಯೊಬ್ಬಳು ತನ್ನ ಗಿರಾಕಿಯನ್ನು ಕೇಳಿದಂತೆ ಎನ್ನಿಸಿ ಅವನ ಇಡೀ ಶರೀರ ತಂಪಾಗಲು ತೊಡಗುತ್ತದೆ. ಅವನು ತನ್ನ ಇಡೀ ಶರೀರವನ್ನು ಕರುಳಿನ ಹಾಗೆ ಹುರಿ ಹಾಕಿ ದೂರ ಹೋಗಿ ಮಲಗಿಕೊಳ್ಳುತ್ತಾನೆ. ಆ ದೃಶ್ಯ ಗರ್ಭದಲ್ಲಿ ಮಗುವೊಂದು ನೀರವತೆಯಿಂದ ಮಲಗಿದಂತೆ ಕಂಡುಬರುತ್ತದೆ.

## ದಯಾ ಪವಾರ (1935 – 1996)

ಮರಾಠಿಯ ದಲಿತ ಸಾಹಿತ್ಯದ ಪ್ರಮುಖ ಲೇಖಕ ದಯಾ ಪವಾರ ಅವರ ಮೂಲ ಹೆಸರು ದಗಡೂ ಮಾರುತಿ ಪವಾರ. ಇವರ ಜನ್ಮ ಮಹಾರಾಷ್ಟ್ರ ರಾಜ್ಯದ ಅಹಮದನಗರ ಜಿಲ್ಲೆಯ ಒಂದು ಹಳ್ಳಿಯಲ್ಲಾಯಿತು. 1956ರಲ್ಲಿ ಮುಂಬೈನ ಪಶುವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪ್ರಯೋಗಶಾಲೆಯ ಸಹಾಯಕರಾಗಿ ವೃತ್ತಿಯನ್ನು ಆರಂಭಿಸಿದರು.

ಕತೆ, ಕವನ, ವೈಚಾರಿಕ, ಆತ್ಮಕಥನ ಮುಂತಾದ ಸಾಹಿತ್ಯದ ಪ್ರಕಾರಗಳಲ್ಲಿ ಅವರು ಬರವಣಿಗೆ ಮಾಡಿದ್ದಾರೆ. 1978ರಲ್ಲಿ ಪ್ರಕಟವಾದ ಅವರ ಆತ್ಮಕತೆ 'ಬಲೂತ' ಅತ್ಯಂತ ಚರ್ಚಿತ ಪುಸ್ತಕ. ಇದು ಕನ್ನಡವೂ ಸೇರಿದಂತೆ ಭಾರತೀಯ ಭಾಷೆಗಳಿಗೆ ಮತ್ತು ಫ್ರೆಂಚ್, ಜರ್ಮನ್, ಇಂಗ್ಲಿಷ್ ಮತ್ತು ಯುರೋಪಿನ ಅನೇಕ ಭಾಷೆಗಳಿಗೆ ತರ್ಜುಮೆಗೊಂಡಿದೆ. ಕವನ ಸಂಗ್ರಹಗಳು: 'ಕೊಂಡವಾಡಾ', 'ಧಮ್ಮಪಾದ'. ಕಥಾಸಂಗ್ರಹಗಳು: 'ಚಾವಡಿ', 'ಜಗಾಲಯ', 'ವಿಟಾಳ', 'ಪಾಸಂಗ್'.

## ರಾಘೋಬಾ

ಕರ್ನಾಟಕದ ಗಡಿಭಾಗದ ಕೊನೆಯ ಹಳ್ಳಿಯಾದ ಜತ್ರಾಟ ಭಿವಶಿಯವರಾದ ರಾಘೋಬಾ ವೃತ್ತಿಯಿಂದ ಖಾಸಗಿ ಶಾಲಾ ಶಿಕ್ಷಕ. ಕತೆ, ಕವನ, ಅನುವಾದ ಆಸಕ್ತಿಯ ಕ್ಷೇತ್ರಗಳು. ಮರಾಠಿ ಭಾಷೆಯ ನಡುವೆ ಸಂಪರ್ಕ ಬೆಸೆಯುವ ದಿಸೆಯಲ್ಲಿ ಅನುವಾದ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದ್ದಾರೆ.